ಕಾಲೋನಿಗಳಿಗೆ ಮತ್ತು ಕೊಳಚೆ ನಿರ್ಮೂಲನ ಮಂಡಳಿ ಘೋಷಿಸಿರುವ ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ನೀಡಿರುವುದಿಲ್ಲ.

ಆ) ಗಂಗಾ ಕಲ್ಯಾಣ ಯೋಜನೆ ಮೂಲಕ ತೆಗೆಸಿರುವ ಎಷ್ಟು ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡರುವುದಿಲ್ಲ;

ಇ) 1994-ರಿಂದ ಈವರೆವಿಗೆ ಎಷ್ಟು ವಿದ್ಯುತ್ ಸಂಪರ್ಕಗಳನ್ನು ನೀಡಲಾಗಿದೆ; ಗಂಗಾ ಕಲ್ಯಾಣ ಯೋಜನೆಯ ಕೊಳವೆಬಾವಿಗಳಿಗೆ ಎಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟಪಂಗಡ ಮತ್ತು ಕೊಳಚೆ ಪ್ರದೇಶಗಳ ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ (ವಿವರ ನೀಡುವುದು)?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಸಮಾಜ ಕಲ್ಯಾಣ ಇಲಾಖೆಗೆ ಅನ್ವಯಿಸುವುದಿಲ್ಲ. ಇದು ನಗರಾಭಿವೃದ್ಧಿ ಇಲಾಖೆಗೆ ಅನ್ವಯಿಸುತ್ತದೆ. (ಕೊಳಚೆ ನಿರ್ಮೂಲನಾ ಮಂಡಳಿ)

ಆ) ಪ್ರಾರಂಭದಿಂದ 30-6-97ರವರೆಗೆ 6559 ಯಶಸ್ವಿ ಕೊಳವೆಬಾವಿಗಳನ್ನು ಕೊರೆದಿದ್ದು .6422 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡಿರುವುದಿಲ್ಲ.

ಜಿಲ್ಲಾವಾರು ವಿದ್ಯುದ್ದೀಕರಣ (ಗಂಗಾ ಕಲ್ಯಾಣ ಯೋಜನೆ)

ಜಿಲ್ಲೆ	ವಿದ್ಯುದ್ದೀಕರಣವಾದ ಸಂಖ್ಯೆ
ಬೆಳಗಾಂ	13
ಕೋಲಾರ	4
ಮೈಸೂರು	39
ಶಿವಮೊಗ್ಗ	9
ಬಿಜಾಪುರ	64
ಬಳ್ಳಾರಿ	8

ವಿಷಯ: ಆಶ್ರಮಶಾಲೆಗಳಲ್ಲಿರುವ ಅಧಿಕಾರಿಗಳ ಕರ್ತವ್ಯ

2541 (3206)

ಶ್ರೀ ಹೆಚ್.ಡಿ.ಬಸವರಾಜ್ (ವಿರಾಜ್‌ಪೇಟೆ): ಮಾನ್ಯ ಸಮಾಜ ಕಲ್ಯಾಣ ಸಚಿವರು

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಅನುದಾನ ಪಡೆದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸಲುವಾಗಿ ಎಷ್ಟು ಆಶ್ರಮ ಶಾಲೆಗಳನ್ನು ರಾಜ್ಯದಲ್ಲಿ ನಡೆಸಲಾಗುತ್ತಿದೆ, ಅವುಗಳು ಯಾವ ಕೇಂದ್ರಗಳಲ್ಲಿ ನಡೆಸಲ್ಪಡುತ್ತದೆ: (ಸಂಸ್ಥೆಗಳ ಸಂಪೂರ್ಣ ವಿವರ ನೀಡುವುದು)

ಆ) ಮೇಲ್ಕಂಡ ಕೇಂದ್ರ ಪುರಸ್ಕೃತ ಅನುದಾನ ಶಾಲೆಗಳ ನಿಯಂತ್ರಣದಲ್ಲಿ ರಾಜ್ಯ ಅಧಿಕಾರಿಗಳ ಪಾತ್ರವೇನು?

ಇ) ಎಷ್ಟು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಈ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ, ಮತ್ತು ಯಾವ ಯಾವ ತರಗತಿಗಳಿಗೆ ಭೋದನೆ ನೀಡಲಾಗುತ್ತಿದೆ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಕೆಂದ್ರ ಸರ್ಕಾರದಿಂದ ಅನುದಾನ ಪಡೆದು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಸಲುವಾಗಿ 28 ಆಶ್ರಮ ಶಾಲೆಗಳು ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ 2 ಆಶ್ರಮ ಶಾಲೆಗಳು ನಡೆಯುತ್ತಿವೆ. (ಸಂಸ್ಥೆಗಳ ವಿವರಗಳ ಬಗ್ಗೆ ಪಟ್ಟಿ ಲಗತ್ತಿಸಿದೆ)

ಆ) ಈ ಶಾಲೆಗಳ ದಿನನಿತ್ಯದ ಕಾರ್ಯದ ಕುರಿತು ನಿಯಂತ್ರಣ ಚಲಾಯಿಸುವ ಬಗ್ಗೆ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಭಾರತ ಸರ್ಕಾರದ ಯಾವುದೇ ನಿರ್ಧಿಷ್ಟ ನಿಗದಿತ ಸೂಚನೆಗಳಿರುವುದಿಲ್ಲ.

ಆದಾಗ್ಯೂ ವಿವಿಧ ಅನುದಾನಿತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ನಿರ್ಧಿಷ್ಟ ವರದಿಯನ್ನು ಸಲ್ಲಿಸಲು ಭಾರತ ಸರ್ಕಾರ ಆಗಿಂದಾಗ್ಗೆ ವರದಿ ಕೇಳುತ್ತದೆ. ರಾಜ್ಯ ಸರ್ಕಾರದ ಅಧಿಕಾರಿಗಳು ಒಂದು ಅನುದಾನಿತ ಸಂಸ್ಥೆಗೆ ಅನುದಾನ ಮಂಜೂರು ಮಾಡಬಹುದೇ ಅಥವಾ ಇಲ್ಲವೇ ಎಂಬುದನ್ನು ಶಿಫಾರಸ್ಸು ಮಾಡುವ ಅಧಿಕಾರವನ್ನು ಮಾತ್ರ ಹೊಂದಿರುತ್ತಾರೆ.

ಇ) 1,750 ವಿದ್ಯಾರ್ಥಿಗಳು ಮತ್ತು 917 ವಿದ್ಯಾರ್ಥಿನಿಯರು ಈ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಈ ಶಾಲೆಗಳಲ್ಲಿ ಸಾಮಾನ್ಯವಾಗಿ ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೂ ಬೋಧನೆ ನೀಡಲಾಗುತ್ತಿದೆ.

ರಾಜ್ಯದಲ್ಲಿ ಕೇಂದ್ರದ ಅನುದಾನದಿಂದ ನಡೆಯುತ್ತಿರುವ ವಸತಿ ಶಾಲೆಗಳ ವಿವರಗಳು.

ಕ್ರ.ಸಂ.	ಜಿಲ್ಲೆಯ ಹೆಸರು	ಕೇಂದ್ರ ಸರ್ಕಾರ ಅನುದಾನ ಪಡೆದು ನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು	ವಸತಿ ಶಾಲೆ ಇರುವ ಸ್ಥಳ	ಮಂಜೂರಾದ ಸಂಖ್ಯೆ	ಒಟ್ಟು
1	2	3	4	5	6
1.	ಕೋಲಾರ	ಅಂಬಿಕಾ ವಿದ್ಯಾಸಂಸ್ಥೆ ರಾಮಾಪುರ ಬಂಗಾರುಪೇಟೆ ತಾಲ್ಲೂಕು.	ರಾಮಪುರ ಬಂಗಾರುಪೇಟೆ ತಾ:	100	93
2.	ಕೋಲಾರ	ವಿದ್ಯಾನಿಕೇತನ್ ವಿದ್ಯಾ ಸಂಸ್ಥೆ ಶ್ರೀನಿವಾಸಪುರ	ಅರವಿಂದ ವಸತಿ ಶಾಲೆ ದೊಡ್ಡಮಾಲದೊಡ್ಡಿ ತಿಮ್ಮಸಂದ್ರ ಶ್ರೀನಿವಾಸಪುರ ತಾ:	100	93
3.	ಕೋಲಾರ	ಕಾವೇರಿ ರೂರಲ್ ಎಸ್.ಸಿ.:ಎಸ್.ಟಿ: ಡೆವಲಪ್‌ಮೆಂಟ್ ಸೊಸೈಟಿ, ಎರ್‌ಪೆಟ್ಲೆ, ಬಿಳ್ಳೂರು ಮಂಡಲ್, ಬಾಗೇಪಲ್ಲಿ ತಾಲ್ಲೂಕು.	ಬಾಗೇಪಲ್ಲಿ 8ನೇ ಬ್ಲಾಕ್ ಕೋಲಾರ ಜಿಲ್ಲೆ	100	55
4.	ಕೋಲಾರ	ವಿವೇಕ್ ವಿದ್ಯಾ ಸಂಸ್ಥೆ ರಾಜೀವ್‌ಗಾಂಧಿ ಮೆಮೋರಿಯಲ್ ವಸತಿ ಶಾಲೆ ಚೊಕ್ಕನ ಹಳ್ಳಿಕ್ರಾಸ್, ಚಿಂತಾಮಣಿ.	ನಾಯನಹಳ್ಳಿ ಚಿಂತಾಮಣಿ ತಾಲ್ಲೂಕು	100	99

1	2	3	4	5	6
5.	ಕೋಲಾರ	ಕೋಲಾರ ಎಜುಕೇಷನ್ ಸೊಸೈಟಿ, ಸತ್ಯಸಾಯಿಎಜುಕೇಷನ್ ಸೊಸೈಟಿ, 5ನೇ ಕ್ರಾಸ್, ಜಯನಗರ, ಕೋಲಾರ.	ಕೋಲಾರ	100	100
6.	ಕೋಲಾರ ಜಿಲ್ಲೆ	ಕರ್ನಾಟಕ ದಲಿತ ಪ್ರೋಗ್ರೇಸೀವ್ ಸೆಂಟರ್ ನವಚೇತನ ಇಂಗ್ಲೀಷ್ ಸ್ಕೂಲ್, ಪೇಟೆ ಚಾಮನಹಳ್ಳಿ, ಟೇಕಲ್ ರಸ್ತೆ, ಕೋಲಾರ ಜಿಲ್ಲೆ.	ಕೋಲಾರ	100	66
7.	ಬೆಂಗಳೂರು ಜಿಲ್ಲೆ	ಜನ ಕಲ್ಯಾಣ ಟ್ರಸ್ಟ್, ಹೊನ್ನಪುರ, ಪಿರಿಯಾಪಟ್ಟಣ, ಮೈಸೂರು	ಹೊನ್ನಾಪುರ	100	97
8.	ಬೆಂಗಳೂರು ಜಿಲ್ಲೆ	ಮರದಳ್ಳಿ ಜಗಜೀವನ ರಾಂ ಸರ್ವೋದಯ ಸಂಘ, ವಿನಾಯಕ ಲೇಔಟ್, ವಿಜಯನಗರ, ಬೆಂಗಳೂರು.	ವಿಜಯನಗರ ಬೆಂಗಳೂರು	100	89
9.	ಬೆಂಗಳೂರು ಜಿಲ್ಲೆ	ಬುದ್ದ ಎಜುಕೇಷನ್ ಸೊಸೈಟಿ, ದೊಡ್ಡಮುದುವಾಡಿ, ಕೆ.ಎನ್.ಇಟ್ಟುಮಡು, ಬಿಡದಿ, ರಾಮನಗರ.	ಇಟ್ಟುಮಡು ಬಿಡದಿ ಹೋಬಳಿ ರಾಮನಗರ	150	136

1	2	3	4	5	6
10.	ಬೆಂಗಳೂರು ಜಿಲ್ಲೆ	ಪಂಚಶೀಲ ವೆಲ್‌ಫೇರ್ ಅಸೋಷಿಯೇಷನ್, ನಾಯಂಡಹಳ್ಳಿ ಮೈಸೂರು ರಸ್ತೆ ಬೆಂಗಳೂರು 39.	ನಾಯಂಡಹಳ್ಳಿ ಬೆಂಗಳೂರು-39	100	85
11.	ಬೆಂಗಳೂರು	ಕರ್ನಾಟಕ ದಲಿತ ಪ್ರೋಗ್ರೆಸೀವ್ ಸೆಂಟರ್, ಇಂದಿರಾಮಹಲ್, ಗಾಂದಿನಗರ, ಬೆಂಗಳೂರು.	ನವಚೇತನ ಇಂಗ್ಲೀಷ್ ಮೀಡಿಯಂ ವಸತಿ ಶಾಲೆ, ಉದಯಗಿರಿ, ಮಂಡ್ಯ	100	73
12.	ಬೆಂಗಳೂರು	ಕರ್ನಾಟಕ ದಲಿತ ಪ್ರೋಗ್ರೆಸ್ಡ್ ಸೆಂಟರ್, ಇಂದಿರಾಮಹಲ್, ಗಾಂಧಿನಗರ, ಬೆಂಗಳೂರು.	ನವಚೇತನ ಇಂಗ್ಲೀಷ್ ಶಾಲೆ, ಮುಲ್ಲೂರು ಬೆಂಗಳೂರು ದಕ್ಷಿಣ	100	100
13.	ಬೆಂಗಳೂರು	ಜ್ಞಾನಜ್ಯೋತಿ ಇಂಗ್ಲೀಷ್ ವಸತಿಶಾಲೆ ಅಂಬೇಡ್ಕರ್ ನಗರ, ಕನಕಪುರ, ಬೆಂಗಳೂರು (ಗ್ರಾ)	ಜ್ಞಾನಜ್ಯೋತಿ ಟೈ ಭೀಮ ಸೊಸೈಟಿ, ಕನಕಪುರ ಬೆಂಗಳೂರು	100	100
14.	ಬೆಂಗಳೂರು	ಅಧ್ಯಯನ ವಿದ್ಯಾಸಂಸ್ಥೆ, ಬೆಂಗಳೂರು	ಅಧ್ಯಯನ ವಸತಿ ಶಾಲೆ ಮಂಡ್ಯ	100	60
15.	ಬೆಂಗಳೂರು	ಚೆನ್ನಮ್ಮ ಚಾರಿಟಬಲ್ ಟ್ರಸ್ಟ್	ಆಲಹಳ್ಳಿ, ಅಂಜನಾಪುರ ಬೆಂಗಳೂರು-62	100	100

1	2	3	4	5	6
16.	ಗೌತಮ ಎಜುಕೇಶನ್ ಸೊಸೈಟಿ ಬೆಂಗಳೂರು.	ಗೌತಮ ಎಜುಕೇಷನ್ ಸೊಸೈಟಿ, ಕಳ್ಳಂಬೆಳ್ಳ, ಶಿರಾ ತಾಲ್ಲೂಕು, ತುಮಕೂರು.	ವಸತಿ ಶಾಲೆ, ಕಳ್ಳಂಬೆಳ್ಳ ಶಿರಾ ತಾಲೂಕು	100	100
17.	ಬಾನು ಎಜುಕೇಶನ್ ಸಂಸ್ಥೆ, ಬೆಂಗಳೂರು	ಬಾನು ಎಜುಕೇಷನ್ ಸಂಸ್ಥೆ, ಕೆಂಗೇರಿ, ಬೆಂಗಳೂರು.	ಕೆಂಗೇರಿ	100	- ಕೇಂದ್ರ ಸರ್ಕಾರದಿಂದ ಅನುದಾನ ನಿಲ್ಲಿಸಲ್ಪಟ್ಟಿದೆ
18.	ಬಾನು ಎಜುಕೇಶನ್ ಸಂಸ್ಥೆ, ಬೆಂಗಳೂರು	ಅರುಂಧತಿ ಎಜುಕೇಶನ್ ಟ್ರಸ್ಟ್ 737ಸಿ, 3ನೇ ಹಂತ, ಬೆಂಗಳೂರು-79.	ಬೆಂಗಳೂರು	100	76
19.	ಮೈಸೂರು	ರಮಾಬಾಯಿ ಅಂಬೇಡ್ಕರ್ ವಸತಿ ಶಾಲೆ ಕುವೆಂಪುನಗರ, ಮೈಸೂರು.	ಮೈಸೂರು	100	93
20.	ಮೈಸೂರು	ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್	ಕೆಂಚನಹಳ್ಳಿ ಹೆಚ್. ಡಿ. ಕೋಟೆ, ಮೈಸೂರು	110	110
21.	ಮೈಸೂರು	ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಬಿ. ಆರ್. ಹಿಲ್ಸ್,	ಬಿ. ಆರ್. ಹಿಲ್ಸ್,	150	150

1	2	3	4	5	6
22.	ಬೀದರ್	ಬಲವಂತ್‌ರಾವ್ ವರಳ್ ಎಜುಕೇಷನ್ ಸೊಸೈಟಿ, ಅಂಬೇಡ್ಕರ್ ವಸತಿ ಶಾಲೆ	ನವದಗಿರಿ ಜನವಾಡ ರಸ್ತೆ ಬೀದರ್	100	91
23.	ಗುಲ್ಬರ್ಗ	ಭಾಗ್ಯೋದಯ ವಿದ್ಯಾವರ್ದಕ ಸಂಘ, ಚಿಂಚೋಳಿ	ಚಂದಾಪುರ ಚಿಂಚೋಳಿ	100	100
24.	ಗುಲ್ಬರ್ಗ	ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ಶೋರಾಪುರ ಗುಲ್ಬರ್ಗ	ಶೋರಾಪುರ ಗುಲ್ಬರ್ಗ	100	81
25.	ಗುಲ್ಬರ್ಗ	ದಕ್ಷಿಣ ಭಾರತ ಎಜುಕೇಷನ್ ಸೊಸೈಟಿ	ಮಾಕ್‌ಡೊನ್ ವಸತಿ ಶಾಲೆ, ಜೇವರ್ಗಿ ರಸ್ತೆ ಗುಲ್ಬರ್ಗ	100	97
26.	ಗುಲ್ಬರ್ಗ	ಉದಯ ವಿದ್ಯಾ ಕೇಂದ್ರ ಸೇಡಂ	ಜೆ.ಪಿ. ಸರ್ವೀಸ್ ಮೆಮೋರಿಯಲ್ ಶಾಲೆ, ಸೇಡಂ, ಗುಲ್ಬರ್ಗ	100	95
27.	ಚಿತ್ರದುರ್ಗ	ಹೊಯ್ಸಳ ವಿದ್ಯಾ ಸಂಸ್ಥೆ	ವಸತಿಶಾಲೆ, ಲೆನಿನ್‌ನಗರ ನಿಟ್ಟುವಳ್ಳಿ, ಹೊಸ ಬಡಾವಣೆ, ದಾವಣಗೆರೆ	150	150

1	2	3	4	5	6
28.	ಧಾರವಾಡ	ಶ್ರೀ ಮಹಾರಾಜ ಪ್ರತಾಪ್‌ಸಿಂಗ್ ಎಜುಕೇಷನ್ ಸೊಸೈಟಿ.	ಮಹಾರಾಣಿ ಎಜುಕೇಷನ್ ಸೊಸೈಟಿ, ಗದಗ ಧಾರವಾಡ	100	33 ಈ ಶಾಲೆಯ ವ್ಯವಸ್ಥೆ ಸರಿ ಇಲ್ಲದ ಕಾರಣ ಕೇಂದ್ರ ಸರ್ಕಾರಕ್ಕೆ ಹಣ ಬಿಡುಗಡೆಗೆ ಶಿಫಾರಸ್ಸು ಮಾಡಿರುವುದಿಲ್ಲಾ.
29.	ಹಾಸನ	ಹಾಸನ ಜಿಲ್ಲಾ ಹರಿಜನ ಸಂಘ	ಆದಿ ಭಾರತೀಯ ವಸತಿ ಶಾಲೆ, ಕೆಂಚಟ್ಟಹಳ್ಳಿ, ಹಾಸನ	100	90
30.	ಶಿವಮೊಗ್ಗ	ಶ್ರೀ ಸೇವಾಲಾಲ್ ವಿದ್ಯಾಸಂಸ್ಥೆ	ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ರಾಗಿಗುಡ್ಡ, ಶಿವಮೊಗ್ಗ.	100	85